ಬೇಕು...ಅಷ್ಟೊತ್ತಿಗೆ ಅನ್ವರನೂ ಕಾಲೇಜು ಮುಗಿಸಿ ಬಂದಿರ್‍ತಾನೆ' ಅನ್ನೋ ಯೋಚನೆಯಲ್ಲಿ ಮೇಡಂನ ಮುಂದಿನ ಮಾತುಗಳು ಅವಳ ಕಿವಿಗೆ ಹೋಗಲಿಲ್ಲ.

ಬೇಂದ್ರೆ ಸಾರಿಗೆ ಬಸ್ಸಿನಿಂದ ಧುಮುಕಿದವಳು ಓಡುನಡಿಗೆಯಲ್ಲಿ ತನ್ನ ಓಣಿ ಮುಟ್ಟಿದಾಗ ಸರಿಯಾಗಿ ಐದೂ ಮುಕ್ಕಾಲಾಗಿತ್ತು. ಆದರೆ ಇಸ್ಮಾಯಿಲ್ ಚಾಚಾನ ಅಂಗಡಿಗೆ ದೊಡ್ಡ ಕೀಲಿಯಿತ್ತು.

'ಅರೆ, ಬಕ್ರೀದ್ ಬಿಟ್ಟರೆ ಚಾಚಾ ಎಂದೂ ಅಂಗಡಿ ಮುಚ್ಚಿದ್ದೇ ಇಲ್ಲವಲ್ಲ' ಅಂತ ಯೋಚನೆಯಲ್ಲೇ ಪಕ್ಕದ ಚಹಾದಂಗಡಿಯ ಹನುಮಂತಪ್ಪನ ಬಳಿ ವಿಚಾರಿಸಿದಳು.

ಅವ, 'ಇವತ್ತು ಮುಂಜಾನಿಯಿಂದ ಅಂಗಡಿ ಬಾಗಿಲೇ ತೆಗಿದಿಲ್ಲ. ಯಾಕೆಂದು ನನಗೂ ಗೊತ್ತಿಲ್ಲ' ಅಂದ.

ಊಟ ಮಾಡಿಯಾದ ಮೇಲೆ ಅವ್ವ, 'ಪ್ರಾಜೂ ನಂಗೆ ರಾಜ್‌ಕುಮಾರ್‌ದು ಹಳೇ ಪಿಕ್ಚರ್ ಹಾಡು ಹಾಕಿಕೊಡೇ ಯೂ ಟ್ಯೂಬ್ ಮೇಲೆ' ಅಂತ ಕೂಗಿದಳು. ಇವಳು ಯಾಂತ್ರಿಕವಾಗಿ ಹಾಡು ಹಚ್ಚಿಕೊಟ್ಟು, ಅವ್ವ ಯಾವಾಗಲೋ ಬಡಿಸಿಟ್ಟಿದ್ದ ಪ್ಲಾಸ್ಟಿಕ್ ಪ್ಲೇಟ್ ಮುಚ್ಚಿದ ಗಂಗಾಳದ ಮುಂದೆ ಊಟಕ್ಕೆ ಕುಳಿತಳು, ಏನೇನೋ ವಿಚಾರದಲ್ಲಿ ತಣ್ಣಗಿನ ಭಕ್ಕರಿ, ಒಣಗಿದ ಜುಣಕ ಗಂಟಲಿಗೆ ತಾಗಿ ಕೆಮ್ಮು ಹತ್ತಿತು, 'ಅವ್ವ ನೀರು' ಅಂತ ಕೂಗಿದರೂ ಪರದೆಯ ಮೇಲೆ ಕಣ್ಣು ನೆಟ್ಟ ತಾಯಿ ಮಿಸುಕದಾದಾಗ ತಾನೇ ಎದ್ದು ಮುಸುರೆಯ ಕೈ ತೊಳೆದು ಬಂದು ಚೊಂಬಿನ ತುಂಬಾ ನೀರು ಕುಡಿದಳು, ಯಾಕೋ ಊಟ ಬೇಡವೆನಿಸಿ, ಗಂಗಾಳ ಎತ್ತಿಕೊಂಡ್ಹೋಗಿ ಹೊರಗಡೆಯ ಗಟಾರಕ್ಕೆ ಚೆಲ್ಲಿ ಬಂದಳು. ಈಗ ಮಾತ್ರ ಅವ್ವ ಕೂತಲ್ಲಿಂದಲೇ ಒದರಿದಳು. 'ಅನ್ನ ಚೆಲ್ಲತೀಯಲ್ಲ, ಮುಂದಿನ ಜಲ್ಮದಾಗ ಭಿಕಾರಿಯಾಗ್ತಿ ಭಿಕಾರಿ!' ಇವಳು ಮಾತನಾಡದೆ ಮೊಬೈಲ್ ಅವಳ ಕೈಯಿಂದ ಗಬಕ್ಕನೆ ಕಸಿದುಕೊಂಡು ತನ್ನ ಕಿವಿಗೆ ಇಯರ್ ಫೋನ್ ಸಿಕ್ಕಿಸಿಕೊಂಡಳು.

'ಕಿತಕೋ ಕಿತಕೋ, ಮನ್ಯಾಗ ನೀನೇ ಒಬ್ಬಾಕಿ ಗಳಿಸುವವಳು ಅಂತ ಧಿಮಾಕು ಬಂದದ ನಿನಗೆ. ಹಡದವ್ವನ ಕಿಮ್ಮತ್ತಿಲ್ಲ...' ಅವ್ವನ ಒದರಾಟ ಮುಂದುವರೆದಿತ್ತು. ಇಯರ್ ಫೋನಿನ 'ಚನ್ನಾ ಮೇರೆಯಾ ಮೇರೆಯಾ...' ಹಾಡಿಗೆ ತೆರೆದು ಮುಚ್ಚುವ ಅವ್ವನ ಬಾಯಿಯ ಜುಗಲಬಂದಿ! ಪ್ರಾಜಕ್ತಾ ಫಕ್ಕನೆ ನಕ್ಕಳು.

ಮರುದಿನವೂ ಚಾಚಾನ ಅಂಗಡಿ ಬಂದ್. ಇವಳನ್ನು ಕಂಡಿದ್ದೇ ಚಹಾದಂಗಡಿಯ ಹನುಮಂತಪ್ಪ ತಾನೇ ಕೂಗಿ ಕರೆದಿದ್ದ. 'ಇಸ್ಮಾಯಿಲ್‌ನ ಸೊಸಿ ಮನಿ ಬಿಟ್ಟು ಹೋಗ್ಯಾಳಂತ. ಎಲ್ಲಿಗ್ಹೋದ್ಲೋ ಏನೋ? ಪಾಪ ತವರ ಮನಿಯಂತೂ ಭಾಳ ದೂರ'

ಅಂದರ....

'ಅಂದರ ನಿನಗ ಗೊತ್ತಿಲ್ಲೇನು? ಇಸ್ಮಾಯಿಲ್ಲನ ಸೊಸಿ ನಸೀಮಾ ದೂರದ ಬೀದರಿನಾಕಿ. ಇದೇ ನಮ್ಮ ಓಣ್ಯಾಗ ಅವರ ಪೈಕಿ ಮಂದಿ ಇದ್ದಾರೆ. ಅವರು ಮಧ್ಯವರ್ತಿಯಾಗಿ ಅಜೀಮನ ಲಗ್ನಾ ಮಾಡಿಸಿದ್ದರು. ಪಾಪ, ಚಂದಾಗೇ ಲಗ್ನಾ ಮಾಡಿಕೊಟ್ಟಿದ್ದರು, ನಾನೂ ಹೋಗಿದ್ದೆನಲ್ಲ ಲಗ್ನಕ್ಕೆ; ಮದುಮಗನಿಗೆ ಬಂಗಾರದ ಚೈನು ಸುದ್ದಾ ಹಾಕಿದ್ದರು. ಈಗ ನೋಡಿದರೆ ಏನೋ ಜಗಳಾ ಎಬ್ಬಿಸಿಕೊಂಡು ಕುಂತಾನ ಈ ಇಸ್ಮಾಯಿಲ್ಲ. ಅವನಿಗೆ ಹೆಣ್ಣುಮಕ್ಕಳ ಕಿಮ್ಮತ್ತಿಲ್ಲ. ಬೇಕಾದ್ರ ತಿಂಗಳೊಪ್ಪತ್ತಿನಾಗ ತನ್ನ ಮಗನಿಗೆ ಇನ್ನೊಂದು ನಿಕಾ ಮಾಡಿಸಿದರೂ ಮಾಡಿಸಿದನೇ' ಅಂದ.

ದಾರಿಗುಂಟ ಪ್ರಾಜಕ್ತಾಳಿಗೊಂದೇ ಯೋಚನೆ. 'ಅಂಗಡಿಯ ಬಾಗಿಲನ್ನೇ ಮುಚ್ಚುವಂಥಾ ಜಗಳ ಏನಿರಬಹುದು? ಈ ಹನುಮಂತಪ್ಪ ಹೇಳುವ ಹಾಗೆ ಅನ್ವರನ ಅಣ್ಣ ಅಜೀಮ ಏನಾದ್ರೂ ಬೇರೆ ಹುಡುಗಿ..... ಛೇ ಛೇ ಕಾಣಲಿಕ್ಕಂತೂ ಸಂಭಾವಿತನಂತೆ ತೋರ್ತಾನೆ ಅಜೀಮ, ಹಾಗೇನಿರಲಿಕ್ಕಿಲ್ಲ. ಮತ್ತೆ ವರದಕ್ಷಿಣೆ ಪರದಕ್ಷಿಣೆ ಏನಾದ್ರೂ? ಅಲ್ಲ ಲಗ್ನವಾಗಿ ಎರಡು ವರ್ಷದ ಮೇಲೆಂಥಾ ವರದಕ್ಷಿಣೆ?' ತಾನೇ ಪ್ರಶ್ನೆ ಒಗೆದುಕೊಳ್ತಾ ತಾನೇ ಉತ್ತರಿಸುತ್ತಾ ಮನೆ ಮುಟ್ಟಿದಳು.

ಮರುದಿನ ಎಂದಿನಂತೆ ತಂಗಳು ಕಟಿ ಭಕ್ಕರಿಗೆ ಒಂಚೂರು ನೀರು ಮಜ್ಜಿಗೆ ಹಾಕಿ ನೆನೆಸಿ ಉಪ್ಪು ಹಾಕಿಕೊಂಡು ನಾಷ್ಟಾ ಮುಗಿಸಿ ಅವ್ವನಿಗೆ 'ಕದ ಹಾಕಿಕೋ' ಅಂತ ಒದರಿ ರಸ್ತೆಗಿಳಿದಳು. ಇನ್ನೂ ಜನಸಂಚಾರ ಅಷ್ಟಿರಲಿಲ್ಲ, ರಸ್ತೆಗೇ ತೆರಕೊಳ್ಳುವ ಮನೆಗಳ ಥಳಿ ಹೊಡೆದ ಅಂಗಳಗಳು ಹಸಿಯಾಗಿದ್ದವು. ಸ್ಕೂಟರ್- ರಿಕ್ಷಾಗಳ ಗಾಲಿಯಡಿ ಸಿಕ್ಕು ಅಡ್ಡಾದಿಡ್ಡಿ ಪಸರಿಸಿದ ರಂಗೋಲಿಯೆಳೆಗಳನ್ನು ನೋಡುತ್ತ ಹನುಮಂತಪ್ಪನ ಚಹಾದಂಗಡಿ ಹೊಕ್ಕಳು.